# <u>ಕೊಳಲನೂದುತ ಬಂದ ನಮ್ಮ ಗೋಪಿಯ ಕಂದ</u>

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 210.
2. **Ref.:** Purandara Sahitya Darshana, Samputa 4, Keerthana Darshana edited by Prof. S.K. Ramachandra Rao, page No. 52.
3. **Note:** Lyrics in these references are same and the singer has followed these lyrics.

ರಾಗ: ಕಾಂಭೋಜ                    ತಾಳ: ಆದಿ

ಕೊಳಲನೂದುತ ಬಂದ ನಮ್ಮ ಗೋಪಿಯ ಕಂದ
ಕೊಳಲನೂದುವುದು ಬಲು ಚಂದ    || ಪ ||

ಆ ವಸುದೇವನ ಕಂದ ಇವ ನೋಡೆ
ದೇವಕಿ ಬಸಿರೊಳು ಬಂದ
ಮಾವ ಕಂಸನ ಕೊಂದ
ಭಾವಜನಯ್ಯ ಮುಕುಂದ    || 1 ||

ಮುತ್ತಿನಾಭರಣವ ತೊಟ್ಟು
ಹಸ್ತದಿ ಕೊಳಲ ಕೊಟ್ಟು
ಕಸ್ತೂರಿ ತಿಲಕವನಿಟ್ಟು
ತುತ್ತುರ ತುರರೆಂಬ ನಾದವ ಪಿಡಿಯೆ    || 2 ||

ಹಿಂದೆ ಗೋವುಗಳ ಹಿಂಡು
ಮುಂದೆ ಗೋಪಾಲರ ದಂಡು
ಹಿಂಗದೆ ದೈತ್ಯರ ಕೊಂದ ಪು-
ರಂದರ ವಿಠಲ ಚಂದ    || 3 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

**ಭಾವಜನಯ್ಯ** – ಮನ್ಮಥನ ತಂದೆ.

**ಹಿಂದಕ್ಕೆ** – ಪ್ರಾಚೀನ ಕಾಲದಲ್ಲಿ.

**Classification:** Keerthane
**Ankita:** purandara vittala
**Location:** NA
**Category:** Krishna Stuti,
**Sub-Category:** kolalu, Krishna, govu, gopi, koosu, Vasudeva, Devaki, kamsa, mukunda, muttu, abharana, kai, Kasturi, Gopala,
**Pravachana:** NA
**Explanation:** NA